ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

**ZILLA PANCHAYAT OFFICE, BELAGAVI-590002**

**ದೂರವಾಣಿ** Telephone: 0831-2407201, 0831-2407206, 0831-2407213

ಫ್ಯಾಕ್ಸ್/Fax: 0831-2429662

e-mail: ceozpbelgaum@yahoo.com

---

ವಿಷಯ:- 2014-15ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 4702ರ ಕೆರೆಗಳ ಪುನರುಜ್ಜೀವನ ಯೋಜನೆಯಡಿ ಜಿಲ್ಲಾ ಪಂಚಾಯತ ಕೆರೆ ಕಾಮಗಾರಿಗಳ ಬಾಕಿ ಬಿಲ್ ಹಾಗೂ ಭೂ ಸ್ವಾಧೀನ ಪರಿಹಾರ ಮೊತ್ತ ಪಾವತಿಗಾಗಿಅನುದಾನವನ್ನು ಬಿಡುಗಡೆ ಮಾಡುವ ಕುರಿತು.

ಓದಲಾದ:-1)ಸರ್ಕಾರದ ಆದೇಶ ಸಂ:ಗ್ರಾಅಪ/35/ಆರ್.ಆರ್.ಸಿ/2014/ಬೆಂಗಳೂರು, ದಿನಾಂಕ:23-4-2014.

2)ಸರ್ಕಾರದ ಆದೇಶ ಸಂ:ಗ್ರಾಅಪ/35/2/ಆರ್.ಆರ್.ಸಿ/2014/ಬೆಂಗಳೂರು, ದಿನಾಂಕ:1-12-2014.

3)ಸರ್ಕಾರದ ಆದೇಶ ಸಂ:ಗ್ರಾಅಪ/35/ಪಿ1/1/ಆರ್.ಆರ್.ಸಿ/2014/ಬೆಂಗಳೂರು, ದಿನಾಂಕ:21-2-2015.

## ಪ್ರಸ್ತಾವನೆ:

ಬೆಳಗಾವಿ ಜಿಲ್ಲಾ ಪಂಚಾಯತ ವ್ಯಾಪ್ತಿಯಲ್ಲಿ ಕೆರೆಗಳ ಪುನರುಜ್ಜೀವನ ಕಾರ್ಯಕ್ರಮದಲ್ಲಿ ಒಟ್ಟು 490 ಕೆರೆ ಕಾಮಗಾರಿಗಳು ಇದ್ದು, ಇದರಲ್ಲಿ ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ಬೆಳಗಾವಿಯಲ್ಲಿ 438 ಕೆರೆಗಳು ಹಾಗೂ ಚಿಕ್ಕೋಡಿ ವಿಭಾಗದಲ್ಲಿ 52 ಕೆರೆಗಳು ಇರುತ್ತವೆ. ಓದಲಾದ ಕ್ರಸಂ:(3)ರಲ್ಲಿ ಕೆರೆಗಳ ಪುನರುಜ್ಜೀವನ ಕಾರ್ಯಕ್ರಮದಡಿ ಜಿಲ್ಲಾ ಪಂಚಾಯತ ಕೆರೆಗಳ ಬಾಕಿ ಬಿಲ್ಲು ಹಾಗೂ ಭೂ ಸ್ವಾಧೀನ ಪರಿಹಾರ ಮೊತ್ತ ಪಾವತಿಗಾಗಿ ಲೆಕ್ಕ ಶೀರ್ಷಿಕೆ 4702-00-101-1-14-132(ಯೋಜನೆ)ರಡಿ, ಬೆಳಗಾವಿ ವಿಭಾಗಕ್ಕೆ ರೂ.1000.00 ಲಕ್ಷ ಹಾಗೂ ಚಿಕ್ಕೋಡಿ ವಿಭಾಗಕ್ಕೆ ರೂ.297.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನವನ್ನು ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ಬೆಳಗಾವಿ ಹಾಗೂ ಚಿಕ್ಕೋಡಿ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಬಿಲ್ಲುಗಳನ್ನು ಆಧರಿಸಿ ಅನುದಾನವನ್ನು ಬಿಡುಗಡೆ ಮಾಡಲು ಈ ಕೆಳಗಿನಂತೆ ಆದೇಶ.

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಪಂ.ರಾ.ಇಂ .ವಿಭಾಗ | ಹಂಚಿಕೆ ಆದ ಅನುದಾನ | 14-15ನೇ ಸಾಲಿನಲ್ಲಿ ಬಿಡುಗಡೆ ಯಾದ ಅನುದಾನ | | 4702-00-101-1-14-132 ರಡಿ ಸರ್ಕಾರದಿಂದ ಈಗ ಬಿಡುಗಡೆ ಯಾದ ಅನುದಾನ | ಒಟ್ಟು ಅನುದಾನ (4+5) | ಬಿಡುಗಡೆ ಗೊಳಿಸುತ್ತಿರುವ ಅನುದಾನ |
|---|---|---|---|---|---|---|---|
| | | | 1ನೇ ಕಂತು | 2ನೇ ಕಂತು | | | |
| 1 | 2 | 3 | 4 | 5 | 6 | 7 | 8 |
| 1 | ಬೆಳಗಾವಿ | 5366.92 | 12.50 | 15.00 | 1000.00 | 1324.50 | 1000.00 |
| 2 | ಚಿಕ್ಕೋಡಿ | | | | 297.00 | | 297.00 |
| | **ಒಟ್ಟು** | **5366.92** | **12.50** | **15.00** | **1297.00** | **1324.50** | **1297.00** |

ಕ್ರ.ಸಂ:ಜಿಪ/ಅವಿ/ಕೆರೆ/ವಿವ- /2014-15 ಬೆಳಗಾವಿ, ದಿನಾಂಕ: -2-2015.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸನ್ 2014-15ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕ ಶೀರ್ಷಿಕೆ 4702-00-101-1-14-132(ಯೋಜನೆ), ಕೆರೆಗಳ ಪುನರುಜ್ಜೀವನ ಯೋಜನೆಯಡಿ ಬೆಳಗಾವಿ ವಿಭಾಗಕ್ಕೆ ಬಿಡುಗಡೆಯಾದ ರೂ.1000.00 ಲಕ್ಷ ಹಾಗೂ ಚಿಕ್ಕೋಡಿ ವಿಭಾಗಕ್ಕೆ ಬಿಡುಗಡೆಯಾದ ರೂ.297.00 ಲಕ್ಷ ಅನುದಾನದಲ್ಲಿ ಬೆಳಗಾವಿ ಜಿಲ್ಲೆಯಲ್ಲಿರುವ ಕೆರೆ ಭೂಸ್ವಾಧೀನ ಪರಿಹಾರ ಮೊತ್ತ ರೂ.17.05 ಲಕ್ಷ ಅನುದಾನವನ್ನು ಪ್ರಥಮ ಆದ್ಯತೆಯ ಮೇಲೆ ಪಾವತಿಸಿ ಬಾಕಿ ಉಳಿದ ಅನುದಾನದಲ್ಲಿ ಜಿಲ್ಲಾ ಪಂಚಾಯತ ಕೆರೆಗಳ ಬಾಕಿ ಬಿಲ್ಲು ಪಾವತಿಸಲು ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ/ಚಿಕ್ಕೋಡಿ ಇವರಿಗೆ ಈ ಕೆಳಗಿನಂತೆ ಬಿಡುಗಡೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಪಂ.ರಾ.ಇಂ .ವಿಭಾಗ | ಹಂಚಿಕೆ ಆದ ಅನುದಾನ | 14-15ನೇ ಸಾಲಿನಲ್ಲಿ ಬಿಡುಗಡೆ ಯಾದ ಅನುದಾನ | | 4702-00-101-1-14-132 ರಡಿ ಸರ್ಕಾರದಿಂದ ಈಗ ಬಿಡುಗಡೆ ಯಾದ ಅನುದಾನ | ಒಟ್ಟು ಅನುದಾನ (4+5) | ಬಿಡುಗಡೆ ಗೊಳಿಸುತ್ತಿರುವ ಅನುದಾನ |
|---|---|---|---|---|---|---|---|
| | | | 1ನೇ ಕಂತು | 2ನೇ ಕಂತು | | | |
| 1 | 2 | 3 | 4 | 5 | 6 | 7 | 8 |
| 1 | ಬೆಳಗಾವಿ | 5366.92 | 12.50 | 15.00 | 1000.00 | 1324.50 | 1000.00 |
| 2 | ಚಿಕ್ಕೋಡಿ | | | | 297.00 | | 297.00 |
| | **ಒಟ್ಟು** | **5366.92** | **12.50** | **15.00** | **1297.00** | **1324.50** | **1297.00** |

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ, ಬೆಳಗಾವಿ ಇವರು ಬೆಳಗಾವಿ ವಿಭಾಗಕ್ಕೆ ರೂ.1000.00 ಲಕ್ಷ ಹಾಗೂ ಚಿಕ್ಕೋಡಿ ವಿಭಾಗಕ್ಕೆ ರೂ.297.00 ಲಕ್ಷ ಅನುದಾನವನ್ನು ತಕ್ಷಣ ಬಿಡುಗಡೆ ಮಾಡಲು ಆದೇಶಿಸಿದೆ.

ಈಗ ಬಿಡುಗಡೆ ಮಾಡಲಾದ ಅನುದಾನವನ್ನು ಈ ಕೆಳಗೆ ಕಾಣಿಸಲಾದ ನಿಬಂಧನೆಗಳನ್ನು ಪಾಲಿಸಿಕೊಂಡು ವಿನಿಯೋಗ ಮಾಡತಕ್ಕದ್ದು.

1) ಕೆರೆಗಳ ಪುನರುಜ್ಜೀವನದ ಈ ಕಾರ್ಯಕ್ರಮವು ಮುಂದುವರೆಯುವ ಕಾರ್ಯಕ್ರಮವಾಗಿರುವುದಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳು/ಅನುಷ್ಠಾನ ಘಟಕಗಳು ಈ ಅಂಶವನ್ನು ಗಮನಿಸುವಂತೆ ಸೂಚಿಸಿದೆ.
2) ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಜಿಲ್ಲಾಧಿಕಾರಿಗಳ ಕ್ರೋಢೀಕೃತ ಕ್ರಿಯಾ ಯೋಜನೆಯಂತೆ ಮೇಲಿನ 1 ರಲ್ಲಿನ ಷರತ್ತನ್ನು ಗಮನಿಸಿಕೊಂಡು ಅನುಮೋದಿತ ಜಿಲ್ಲಾ ಪಂಚಾಯತ ಕೆರೆ ಕಾಮಗಾರಿಗಳ ಬಿಲ್ಲುಗಳ ಪಾವತಿಗೆ ಮಾತ್ರ ವಿನಿಯೋಗಿಸತಕ್ಕದ್ದು.
3) ಕೆರೆಗಳ ಪುನರುಜ್ಜೀವನ ಕಾರ್ಯಕ್ರಮದಡಿ ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಕಾಮಗಾರಿ ಅನುಸಾರ ಖಜಾನೆಯಿಂದ ಡಿ.ಸಿ. ಬಿಲ್ಲು ಮುಖಾಂತರವೇ ಡ್ರಾ ಮಾಡಿ ನೇರವಾಗಿ ಗುತ್ತಿಗೆದಾರರಿಗೆ ಪಾವತಿ ಮಾಡತಕ್ಕದ್ದು.
4) ಈ ಆದೇಶದಲ್ಲಿ ಬಿಡುಗಡೆಯಾದ ಹಣವನ್ನು ಪಿ.ಡಿ. ಖಾತೆಯಲ್ಲಿರಿಸಬಾರದು ಹಾಗೂ Payees Receipt ಮುಖಾಂತರ ಡ್ರಾ ಮಾಡುವ ಪದ್ಧತಿಯನ್ನು ಅನುಸರಿಸತಕ್ಕದ್ದಲ್ಲ.
5) ಈಗ ಬಿಡುಗಡೆ ಮಾಡಲಾದ ಅನುದಾನವನ್ನು ದಿ:31-3-2015 ರೊಳಗೆ ವಿನಿಯೋಗಿಸತಕ್ಕದ್ದು.
6) ಈ ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನಕ್ಕೆ ವೆಚ್ಚದ ಮಾಹಿತಿ Worksoft Website ನಲ್ಲಿ Upload ಮಾಡುವುದರೊಂದಿಗೆ ವೆಚ್ಚ ಮಾಹಿತಿ ಹಾಗೂ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಮಾತ್ರ ಮುಂದಿನ ಕಂತಿನ ಅನುದಾನ ಬಿಡುಗಡೆಗೆ ಪರಿಗಣಿಸಲಾಗುವುದು.

7) ಬಿಡುಗಡೆಯಾದ ಅನುದಾನಕ್ಕೆ ವೆಚ್ಚದ ಮಾಹಿತಿಯನ್ನು ಹಾಗೂ ಕಾಮಗಾರಿಗಳ ಪ್ರಗತಿ ವಿವರವನ್ನು Worksoft Website ನಲ್ಲಿ ದಾಖಲಿಸತಕ್ಕದ್ದು.

8) ಬೆಳಗಾವಿ ಜಿಲ್ಲೆಗೆ ಬಿಡುಗಡೆಯಾದ ಅನುದಾನದಲ್ಲಿ ಕೆರೆ ಭೂಸ್ವಾಧೀನ ಪರಿಹಾರ ಮೊತ್ತ ರೂ.17.05 ಲಕ್ಷ ಅನುದಾನವನ್ನು ಪ್ರಥಮ ಆದ್ಯತೆ ಮೇಲೆ ಪಾವತಿಸಿ ನಂತರ ಉಳಿದ ಅನುದಾನದಲ್ಲಿ ಕೆರೆ ಕಾಮಗಾರಿಗಳ ಬಾಕಿ ಬಿಲ್ ಪಾವತಿಸುವುದು.

9) ಬಳಕೆಯಾದ ಹಣ ಮತ್ತು ಕಾಮಗಾರಿ ಪ್ರಗತಿಯನ್ನು ಜಿಲ್ಲಾ ಪಂಚಾಯತಿಗೆ ಸಲ್ಲಿಸತಕ್ಕದ್ದು.

10) ಅಂದಾಜು ಮೊತ್ತಕ್ಕೆ ತಕ್ಕಂತೆ ಕಾಮಗಾರಿಯ ವೆಚ್ಚವನ್ನು ಸೀಮಿತಗೊಳಿಸತಕ್ಕದ್ದು.

11) ಕಾಮಗಾರಿಯ ಅನುಷ್ಠಾನದಲ್ಲಿ ಸರಕಾರದಿಂದ ಹಾಗೂ ಜಿಲ್ಲಾ ಪಂಚಾಯತ ವತಿಯಿಂದ ಕಾಲಕಾಲಕ್ಕೆ ನೀಡಲಾದ ಮಾರ್ಗಸೂಚಿ ಸುತ್ತೋಲೆ ಮತ್ತು ಆದೇಶ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

12) ಕಾಮಗಾರಿಗೆ ನಿಗಧಿಪಡಿಸಿದ ಅನುದಾನವನ್ನು ಬೇರೆ ಕಾಮಗಾರಿಗೆ ಅಥವಾ ಯೋಜನೆಗೆ ವರ್ಗಾಯಿಸತಕ್ಕದ್ದಲ್ಲ.

13) ಗಾಂಧಿ ಸಾಕ್ಷಿ ಕಾಯಕದಲ್ಲಿ ವೆಚ್ಚದ ಮಾಹಿತಿಯನ್ನು ಕಡ್ಡಾಯವಾಗಿ ದಾಖಲಿಸತಕ್ಕದ್ದು.

(ದೀಪ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

**<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.</u>**

1) ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ, ಬೆಳಗಾವಿ.
2) ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
3) ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ಬೆಳಗಾವಿ/ಚಿಕ್ಕೋಡಿ.
4) ರಕ್ಷಿತ ಕಡತಕ್ಕೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ